# “ಸ್ನೇಹ ಅತಿ ಮಧುರ...”

ಬೆಳಗಿನ ನಿದ್ದೆ ಮಂಪರಿನಲ್ಲಿ ದಿಂಬಿನ ಪಕ್ಕದಲ್ಲಿಟ್ಟ ಮೊಬೈಲ್‌ನಲ್ಲಿ ಅವನ ‘ಗುಡ್ ಮಾರ್ನಿಂಗ್’ ಮೆಸೇಜ್. ಓದಿ ನಸುನಕ್ಕರೂ ಸುಮ್ಮನೇ ಕಿರಿಕಿರಿ ಮಾಡಿಕೊಳ್ಳುವುದು.

(ಎಷ್ಟು ಹುಡುಗಿಯರಿಗೆ ಫಾರ್ವರ್ಡ್ ಮಾಡ್ತಾ ಇದ್ನೋ ಮಗಾ, ನನಗೂ ಒಂದು ಎಸೆದಿದ್ದಾನೆ!)

ಈ ಮಹಾನಗರಿನಲ್ಲಿ ನಾನೂ ಅವನೂ ಹತ್ತಿರ-ಹತ್ತಿರವಿದ್ದೂ ಸಿಕ್ಕೂ ಸಿಗಲಾರದೇ ಮನದೊಳಗೇ ಚಡಪಡಿಸುವುದು,

(ಮಚ್ಚಾ, ನನ್ನನ್ನು ಬಿಟ್ಟು ಏನ್ ಮಜಾ ಮಾಡ್ತಿದಾನೋ?!)

ಸಿಕ್ಕರೆ ನನ್ನದೆಲ್ಲವನ್ನೂ ಬಚ್ಚಿಟ್ಟು ಅವನೆಲ್ಲ ವಿಷಯಗಳನ್ನು ಉಪಾಯವಾಗಿ ಹೊರಗೆಳೆಯುವುದು, ಮನದಲ್ಲೇ ಹೋಲಿಕೆ ಮಾಡಿ, ತಾಳೆ ಹಾಕಿ, ನನ್ನದೆಲ್ಲವನ್ನೂ ಉತ್ಪ್ರೇಕ್ಷೆ ಮಾಡಿ ಹೇಳುವುದು

(ನಾನು ಏನು ಅಂತ ಅವನಿಗೆ ಗೊತ್ತಿದೆ, ಆದ್ರೂ...)

ಒಬ್ಬನೇ ಕುಳಿತು, ತನಗೆ ತಾನೇ ಬೇಸರವಾಗಿ, ಸ್ವಯಂ-ಹನನ ಮಾಡಿಕೊಳ್ಳುತ್ತಿರುವಾಗ ಗಾಬರಿಗೊಂಡು, ಓಹ್ ಅವನಿದ್ದಾನಲ್ಲ ಫೋನ್ ಮಾಡೋಣ ಎಂದುಕೊಳ್ಳುವುದು

(ಫೋನ್ ಮಾಡಿ, ಯಥಾ ಪ್ರಕಾರ ಸುಳ್ಳೇ ಸಿಟ್ಟಿನಲ್ಲಿ ಜಗಳವಾಡೋದು)

ಸಣ್ಣ ಸಣ್ಣ ವಿಷಯಕ್ಕೆಲ್ಲ ಜಗಳವಾಡಿ, ನನ್ನ ತಪ್ಪು ಗೊತ್ತೇ ಆಗದಂತೆ ಮುಚ್ಚಿ ಹಾಕಿ, ಅವನಿಂದಲೇ ಕ್ಷಮಾಯಾಚನೆ ಮಾಡಿಸಿಕೊಳ್ಳುವುದು

(ಈ ವಿಷಯದಲ್ಲಿ ಅವನು ಶುದ್ಧ ಮಡ್ಡಿ-ಮಿದುಳಿನವನು!)

ಅವನು ಸಕ್ಕತ್ ಜಿಪುಣ, ದುಡ್ಡು ಕೂಡಿ ಹಾಕ್ತಾ ಇದಾನೆ, ಇನ್ನೇನು ಪ್ರೀತಿಸಿ, ಮದುವೆಯೂ ಆಗಿಬಿಡ್ತಾನೆ, ಅದಕ್ಕೇ ಶಾಪಿಂಗ್‌ಗೆ ಕರೆದುಕೊಂಡು ಹೋಗಿ, ನಿಪ್ಪಲ್-ಹಾಲಿನ ಬಾಟ್ಲಿ ಕೊಡಿಸಿಬಿಡುವುದು

(ಆಗ್ಲೂ ಹೀಗೇ ತರಲೆ ಮಾಡಿಕೊಂಡು ಇರ್ತೀವಾ ಮಾರಾಯ?)

ಮೆಸೆಂಜರ್‌ನಲ್ಲಿ ಯಾವತ್ತಿನದೋ “ಇದೀಯೇನೋ?” “ನಂಗ್ಯಾಕೋ ಇವತ್ತು ತುಂಬಾನೇ ಅಳು ಬರ್ತಿದೆ” ಅಂತೆಲ್ಲ ಓದಿ ಗಾಬರಿಯಾಗಿ, ಫೋನ್ ಮಾಡಿದರೆ “ಏ, ಏನಿಲ್ಲ ಮಾರಾಯ!” ಅಂತ ಅವನು ಅನ್ನುವುದು

(ಏನಿಲ್ಲದಿದ್ದರೂ, ಏನಿದೆ ಅಂತ ನನಗೆ ಗೊತ್ತಿದೆ ಅಂತ ಅವನಿಗೂ ಗೊತ್ತು!)

ಪ್ರತೀ ಸಲ ಫೋನ್ ಮಾಡಿದಾಗಲೂ ಅವಳದೇ ತರಲೆ ಮಾತುಗಳು. ಆದರೆ ನನ್ನ ತರಲೆಗಳಿಗೆಲ್ಲ ಬೈಗುಳ! ತುಂಬಾನೇ ಹದ್ದು ಮೀರಿ ಹೋಗಿದೀಯ ಅನ್ನೋ ಟೀಕೆ ಬೇರೆ.

(ಫೋನ್ ಇಡುವುದಕ್ಕೂ ಮುಂಚೆ ‘ಗಾಡ್ ಬ್ಲೆಸ್ ಯೂ’ ಅನ್ನೋ ಶಾಪ ಕೂಡ!!)

ವಾರಾಂತ್ಯದ ನಟ್ಟ ನಡು ರಾತ್ರಿಗಳಲ್ಲಿ, ರೂಮಿನಲ್ಲಿ, ಕಂಪ್ಯೂಟರ್ ಮುಂದೆ ಸಿನೆಮಾ ನೋಡುತ್ತ, ಮಾತನಾಡುತ್ತ ಕುಳಿತಿರುವಾಗ ಏನಕ್ಕೋ ಉಕ್ಕಿಬರುವ ಅವನ ದುಃಖ, ಬಿಕ್ಕಳಿಕೆ.

(ಅದಕ್ಕೆಲ್ಲ ನನ್ನ ಸುಳ್ಳೇ ಸಾಂತ್ವನ, ಗಂಭೀರ ಗೀತೋಪದೇಶ! ನಾನೂ ಹೀಗೇ ಅಲ್ಲವೇ?)

ಫೋರಂ ಮುಂದೆ ಕುಳಿತು, ಕಂಡ ಕಂಡ ಹುಡುಗಿಯರಿಗೆಲ್ಲ ಒಂದರಿಂದ ಹತ್ತರವರೆಗಿನ ಅಂಕಪಟ್ಟಿ ಕೊಟ್ಟುಕೊಂಡು, ನಾವೆಷ್ಟು ಚಾರಿತ್ರ್ಯಹೀನರಾಗಿದ್ದೇವೆ ಎಂದುಕೊಂಡು ನಕ್ಕುಬಿಡುವುದು.

(ಇದನ್ನೆಲ್ಲ ಶುರುಮಾಡಿದ್ದೇ ನೀನು, ‘ಡರ್ಟಿ ಮೈಂಡೆಡ್ ಫೆಲೋ’!)

ಎಲ್ಲೋ ಹೋಗ ಹೊರಟು, ಏನೋ ಮಾಡ ಹೊರಟು, ಇವನು ಬಾರದೇ, ಅವನೂ ಇಲ್ಲದೇ ತನಗೆ ತಾನೇ ಸುಮ್ಮನೆ ಕಾರಣಗಳ ಕೊಟ್ಟುಕೊಂಡು ಸೋಮಾರಿಯಾಗಿಬಿಡುವುದು.

(ಯಾವತ್ತಾದರೂ ಇವರ ಪ್ರಭಾವದಿಂದ ಹೊರಗೆ ಬರ್ತೀನಾ? ಯಾಕಾದರೂ ಬರಬೇಕು?)

ಹೆಚ್ಚಿನ ಮಾತೇ ಇಲ್ಲದಂತೆ ಒಬ್ಬರನೊಬ್ಬರು ಹಾಗೇ ಅರ್ಥೈಸಿಕೊಳ್ಳುತ್ತಲೇ ಹೋಗುವುದು, ಮೌನದಲಿ ಬೇಕು ಬೇಡಗಳ ಅರಿಯುವುದು, ಹಾಗೇ ನಡೆದುಕೊಳ್ಳುವುದು.

(ಏನೋ ಮಾರಾಯ, ಇಷ್ಟು ದಿನಗಳ ನಂತರ ಸಿಕ್ಕರೂ ಮಾತೇ ಇಲ್ಲಾ?)

ಮಾತು ಶುರುವಾಯಿತೋ, ಬರೀ ಯಾರ ಅರಿಕೆಗೂ ಸಿಗದ, ಬೇರೆಯವರ ನಿಲುಕಿಗೂ ನಿಲುಕದ ವಿಷಯಗಳದ್ದೇ ಚರ್ಚೆ. ನಮ್ಮದೇ ಸಿದ್ಧಾಂತಗಳು, ಸಿದ್ಧಾಂತಗಳಿಗೆಲ್ಲ ಪ್ರತಿಸಿದ್ಧಾಂತಗಳು!

(ಯಾರಾದರೂ ನಮ್ಮವೆಲ್ಲ ಮಾತುಗಳನ್ನು ಕೇಳಿದರೆ ಹುಚ್ಚರಾಗೋದು ಖಂಡಿತ!)

'ನೀನಿದ್ದಿದ್ದರೆ ಈ ಮಳೇನ ಎಷ್ಟು ಎಂಜಾಯ್ ಮಾಡ್ತಿದ್ದೆ ಗೊತ್ತಾ? ನಾಲ್ಕು ದಿನದಿಂದ ಒಂದೇ ಸಮ ಮುಸಲಧಾರೆ!' ಅವನ ಪ್ರಾಮಾಣಿಕ ಹಳಹಳಿ.

(ಇರಲಿ ಬಿಡು, ನಾನು ಬಂದಾಗಲೂ ಅಬ್ಬರಿಸಿ ಸುರಿಯಲಾರದೇ ಶ್ರಾವಣ?)

'ನನ್ನ ಮಗನಿಗೆ ನಿನ್ನ ಮಗಳನ್ನೇ ಡವ್ ಹೊಡಿಯೋಕೆ ಹೇಳಿಕೊಡ್ತೀನಿ' ಅನ್ನೋ ಇವನ ದೂರಾಲೋಚನೆಯ ಪೊಳ್ಳು ಬೆದರಿಕೆ!

(ಆದ್ರೂ, ನನ್ನ ಹೆಣ್ಣು ಮಕ್ಕಳನ್ನೆಲ್ಲ ಇವನ ಗಂಡು ಮಕ್ಕಳಿಂದ ದೂರವಿಟ್ಟು ಬೆಳೆಸಬೇಕಪ್ಪ!)

'ನಿನ್ನ ಮಗನನ್ನು ಮೊದಲು ಹೊತ್ಕೊಂಡು ಹೋಗಿ ಈಜುಕೊಳಕ್ಕೆ ಎಸೆದುಬಿಡ್ತೀನಿ, ಹೆದರಿಕೆ ಬೆದರಿಕೆಯೆಲ್ಲ ಒಂದೇ ಏಟಿಗೆ ಮಟಾಶ್!' ಇನ್ನೊಬ್ಬನ ಸವಾಲು.

(ಅಪ್ಪನಿಗೆ ಈಗಿರುವ ಹೆದರಿಕೆ ನೀಗಲು ಮುಂದೆ ಬರುವ ಮಗನಿಗೆ ತರಬೇತಿ?!)

'ನೀನೂ ಸಮುದ್ರವೂ ಒಬ್ಬರನೊಬ್ಬರು ಹೇಗೆ ರಿಲೇಟ್ ಮಾಡಿಕೊಳ್ತೀರ ಅಂತಾ ನೋಡ್ಬೇಕಾಗಿದೆ, ಮುಂದಿನ ಸಲ ನನ್ನನ್ನೂ ಸಮುದ್ರ ತೀರಕ್ಕೆ ಕರೆದುಕೊಂಡು ಹೋಗಬೇಕು, ಆಯ್ತಾ?' ಅವಳ ಕಟ್ಟಪ್ಪಣೆ!

(ನನ್ನ ಹೃದಯದೊಳಗೆ ಅಬ್ಬರಿಸುತ್ತಿರೋ ಸಮುದ್ರದೊಡನೆಯೇ ನಾನಿನ್ನೂ ರಿಲೇಟ್ ಆಗಿಲ್ಲ!)

ಇಳಿ ಸಂಜೆಯ ವಾಯುವಿಹಾರದಲ್ಲಿ ಅವನದೊಂದು ಕನಸು 'ಇನ್ನಿಪ್ಪತ್ತು ಮೂವತ್ತು ವರ್ಷಗಳಾದ ಮೇಲೂ ನಾವು ಹೀಗೇ ನಮ್ ನಮ್ಮ ವಿಷಯಗಳ ಮಾತಾಡ್ಕೊಂತಾ ವಾಕಿಂಗ್ ಹೋಗ್ತಾ ಇರಬೇಕು'

(ನಿಹಾರಿಕಾಳ ಹುಡುಗನ್ನ ನೋಡಿದ್ಯಾ? ಹೇಗನಿಸುತ್ತೆ? ಇಬ್ಬರೂ ಸುಖವಾಗಿರ್ತಾರಾ?!)

ಎಲ್ಲದಕ್ಕೂ ಮೊದಲು, ನನಗಿಂತ ಮೊದಲು ಅವನಿಗೆ, ಅವನಿಗಿಂತಲೂ ಇವನಿಗೆ ಪ್ರೇಮವಾಗಿಬಿಡುತ್ತೆ ಅಂತ ಅಸೂಯೆ ಪಟ್ಟುಕೊಂಡು ಸುಮ್ಮಸುಮ್ಮನೇ ಕಚ್ಚಾಡಿಕೊಳ್ಳುವುದು.

(ಯಾವುದದು ಹೊಸಾ ನಂಬರ್ ನಿನ್ನ ಮೊಬೈಲಿನಲ್ಲಿ– ಮಧುರ ಯಾರು?)

'ಈ–ಮೇಯ್ಲ್‌ಗಳ ಪಾಸ್‌ವರ್ಡ್‌ನೆಲ್ಲ ಬದಲಾಯಿಸಿದ್ದೀಯಾ? ನನಗ್ಗೊತ್ತು, ಏನೋ ಭಾನಗಡಿ ನಡೆಸಿದ್ದೀಯ. ಹೊಸಾ ಈ–ಮೇಯ್ಲ್ ವಿಳಾಸವನ್ನೂ ಸೃಷ್ಟಿಸಿಕೊಂಡಿದೀಯ ಅನ್ಸುತ್ತೆ?

(ನಾನೂ ಒಂದು ಹೊಸದಾದ ಈ–ಮೇಯ್ಲ್ ವಿಳಾಸ ಸೃಷ್ಟಿಸಿಕೊಳ್ಳೋದು!)

ಅವನ ಪ್ಲೇಟಿನಲ್ಲಿರೋ ಪಾನಿ ಪೂರಿ, ಇವನ ಐಸ್ ಕ್ರೀಂ, ಎಲ್ಲದಕ್ಕೂ ಕಚ್ಚಾಟ. ಕೊನೆಗೆ ಎಂಜಲು ತಿನ್ನದವನಿಂದ ಸೋಲೊಪ್ಪಿಗೆ– 'ತಗೋಳೋ, ನೀನೇ ಎಂಜಾಯ್ ಮಾಡು'

(ನಾಳೆ ಬೆಳಿಗ್ಗೆ ನನಗೆ ಹೊಟ್ಟೆ ನೋವು ಗ್ಯಾರಂಟಿ!)

ತಂತಮ್ಮ ತರಲೆಗಳಿಂದಲೇ ತಾವೇ ಬೇಸತ್ತು ಪರಸ್ಪರ ಬೈದುಕೊಳ್ಳೋದು, ಸಿಟ್ಟು ಮಾಡಿಕೊಳ್ಳೋದು, 'ಹೀಗೇ ಆದರೆ ನೀನು ಉದ್ಧಾರವಾಗೋಲ್ಲ!'

(ಉದ್ಧಾರವಾದರೂ ಆಗದಿದ್ದರೂ, ಹೀಗೇ ಇದ್ದರೆ ಸಾಲದೇ?)

ರಾತ್ರಿಯ ಜನಸಂದಣಿಯಲ್ಲಿ, ಜಯನಗರದ ಕಟ್ಟೆಯ ಮೇಲೆ ಸಾಲಾಗಿ ಕುಳಿತು, ಮೌನವನ್ನೆಲ್ಲ ಹಾಗೇ ಕುಳಿತು ಅನುಭವಿಸುವುದು, ಮೌನವೇ ಮಾತಾಗಿ, ನನ್ನ ಮನಸು ಅವರಿಗೂ ಗೊತ್ತಾಗಿ, ಅವರ ಯೋಚನೆಗಳೂ ನನಗೆ ತಿಳಿದುಬಿಡುವುದು.

(ಶುದ್ಧ ಯೂಸ್‌ಲೆಸ್ ಯೋಚನೆಗಳು ಅಂದ್ರೆ ನಮ್ಮವೇ ಇರಬೇಕು!)

...

**"ಸ್ನೇಹ ಅತಿ ಮಧುರ, ಸ್ನೇಹ ಅದು ಅಮರ..."**

**ಹ್ಯಾವ್ ಎ ನೈಸ್ ಡೇ**

**ಶಿವಕುಮಾರ ಕೆ. ಎಸ್.** *ks_shivu@yahoo.com*